**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 23/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.04**

**ದಿನಾಂಕಃ 24.12.2025** **ಸಿಡಬ್ಲ್ಯೂ.05**

| | |
|---|---|
| ಹೆಸರು | ಪ್ರಿಯಾಂಕ |
| ತಂದೆ ಹೆಸರು | ಮಹೇಶಪ್ಪ |
| ವಯಸ್ಸು | 23 ವರ್ಷ |
| ಉದ್ಯೋಗ | ಗ್ರಾಮ ಪಂಚಾಯ್ತಿಯಲ್ಲಿ ಕೆಲಸ |
| ವಾಸ ಸ್ಥಳ | ಮೇದೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 1 ನನ್ನ ತಮ್ಮ. ಚಾಸಾ. 2 ಮತ್ತು 3 ರವರ ಪರಿಚಯವಿಲ್ಲ. ಚಾಸಾ.5 ನನ್ನ ಅತ್ತೆ. ಚಾಸಾ.6 ನನ್ನ ತಂಗಿ. ಚಾಸಾ.8 ನನ್ನ ಮಾವ. ದಿಃ 04.11.2024 ರಂದು ಬೆಳಿಗ್ಗೆ ಬೆಂಗಳೂರಿನಿಂದ ದೇವಸ್ಥಾನಗಳಿಗೆ ಹೋಗಿ ನಂತರ ನಮ್ಮ ಊರಾದ ರಟ್ಟಿಹಳ್ಳಿ ತಾಲೂಕು ಮೇದೂರಗೆ ಬಂದಿದ್ದರು. ನಾನು ಸಹ ಅವರೊಂದಿಗೆ ಬೆಂಗಳೂರಿಗೆ ಅವರ ಕಾರಲ್ಲಿ ಹೋದೆನು. ನಾನು, ಚಾಸಾ.1 ಮತ್ತು ಚಾಸಾ.6 ರವರು ಹೊರಟಿದ್ದೆವು. ಹೋಗುತ್ತಿರುವಾಗ ಹರಗನಹಳ್ಳಿ ಬ್ರಿಡ್ಜ ಹತ್ತಿರ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ವೇಗವಾಗಿ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿತು. ನಾನು ಮತ್ತು ಚಾಸಾ.6 ಹಿಂದೆ ಕುಳಿತಿದ್ದೆವು. ಆಗ ನಮಗೆ ಮತ್ತು ಚಾಸಾ.6 ರವರಿಗೆ ತುಂಬಾ ಪೆಟ್ಟು ಬಿತ್ತು. ನನಗೆ ಪ್ರಜ್ಞೆ ಇರಲಿಲ್ಲ. ನನಗೆ ಪ್ರಜ್ಞೆ ಬಂದಾಗ ನಾನು ಆಸ್ಪತ್ರೆಯಲ್ಲಿ ಇದ್ದೆನು. ನನಗೆ ಕತ್ತು ಮತ್ತು ಎಡಗಾಲಿಗೆ ಪೆಟ್ಟಾಗಿತ್ತು. ಬಸ್ ಚಾಲಕ ಮತ್ತು ಕಂಡಕ್ಟರ್ ನನಗೆ ಪ್ರಜ್ಞೆ ಬಂದ ನಂತರ ಆಸ್ಪತ್ರೆಗೆ ಬಂದು ಮಾತನಾಡಿಸಿಕೊಂಡು ಹೋಗಿದ್ದರು. ಸದರಿಯವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಈ ದಿನ ಬಸ್ ಚಾಲಕ ನ್ಯಾಯಾಲಯದಲ್ಲಿ ಇದ್ದಾರೆ. ಈ ಎಲ್ಲಾ ವಿಚಾರವಾಗಿ ಚಾಸಾ.1 ರವರು ದೂರು ನೀಡಿದ್ದಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಪಿ ವಕೀಲರಿಂದಃ**

ನಾನು ಪೊಲೀಸರಿಗೆ ಖುದ್ದಾಗಿ ಹೇಳಿಕೆ ನೀಡಿಲ್ಲ. ಕಾರ ಹಾಗೂ ಬಸ್ ನ ನಂಬರ್ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಆರೋಪಿಯ ಬ್ರಾಡ್ಜ ನಂಬರ್ ನನಗೆ ಗೊತ್ತಿಲ್ಲ. ಕಾರಿನ ಹಿಂದೆ ಕುಳಿತಾಗ ನಮ್ಮ ಕಾರ ಹಿಂಬಾಗ ಏನಾಗುತ್ತದೆ ಎಂದು ನಮಗೆ ಕಾಣುವುದಿಲ್ಲ ಎಂದರೆ ಸರಿ. ಹರಗನಹಳ್ಳಿ ಬ್ರಿಡ್ಜ ಹತ್ತಿರ ದ್ವಿಮುಖ್ಯ ರಸ್ತೆ ಇರುತ್ತದೆ ಅಲ್ಲಿ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಬ್ರಿಡ್ಜ ಹತ್ತಿರ ರಸ್ತೆ

ಕೆಟ್ಟು ಹೋಗಿದೆ ಎಂದರೆ ನಾನು ನೋಡಿಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಾರು ಮುಂದೆ ಇನ್ನೊಂದು ಕಾರು ಹೋಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯಾತ ಯಾವುದೇ ಸೂಚನೆಯನ್ನು ನೀಡದೇ ಬಲಬಾಗಕ್ಕೆ ಹಾದು ಹೋಗಿರುತ್ತಾರೆ ಎಂದರೆ ಮತ್ತು ನಮ್ಮ ಕಾರು ಚಾಲಕ ಸಹ ಅದೇ ರೀತಿ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮುಂದಿದ್ದ ಕಾರ ಚಾಲಕ ಹಾಗೂ ನಮ್ಮ ಕಾರ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಪರಿಹಾರಕ್ಕೊಸ್ಕರ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ.1 ರವರ ತಪ್ಪಿನಿಂದ ಅಪಘಾತ ಸಂಬವಿಸಿದರೂ ಸಹ ಆರೋಪಿ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ